# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 06.02.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-06-02-2021ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ-152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| 4 | ಶ್ರೀ ಪುರುಷೋತ್ತಮ, (ಎಲೆಕ್ಟ್ರೀಕಲ್, ಬಿ.ಬಿ.ಎಂ.ಪಿ) | 9611177415 |
| 5 | ಶ್ರೀ.ಶಶಿಧರ ಸಹಾಯಕ ಅಭಿಯಂತರರು ಮೂಲಭೂತ ಸೌಕರ್ಯ ಕೇಂದ್ರ | 9341320868 |
| 6 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೇಸ್ಕಾಂ | 9900724229 |
| 7 | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| 8 | ಶ್ರೀ ಸೈಯದ್ ನಜರೂದ್ದಿನ್, ಸದಸ್ಯರು | 9741518897 |
| 9 | ಶ್ರೀ.ವಿ.ಗಿರೀಶ್ ವಿದ್ಯತ್ ವಿಭಾಗ ಬಿ.ಬಿ.ಎಂ.ಪಿ (ದಕ್ಷಿಣ) | 8951596617 |
| 10 | ಶ್ರೀ ತಿಮ್ಮಗೌಡ ಎ.ಎಸ್.ಐ ಮಡಿವಾಳ ಪೊಲೀಸ್ ಠಾಣೆ | 9845644651 |
| 11 | ಶ್ರೀ.ಮಂಜುನಾಥ್.ಪಿ ವಾರ್ಡ್ ಮೇಲ್ವಿಚಾರಕರು ಘ.ತ್ಯಾನಿ | 9740903427 |
| 12 | ಶ್ರೀ.ಎನ್.ಲೋಕೇಶ್ | 9448579144 |
| 13 | ಶ್ರೀಮತಿ.ಭೂದೇವಿ ತೋಟಗಾರಿಕೆ ಇಲಾಖೆ | 953897538 |
| 14 | ಶ್ರೀ.ಜೆನ್‌ಸನ್ | 9886263227 |
| 15 | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾನಿ | 9980225272 |
| 16 | ಮೊಹಮದ್ ಅಜ್ಮೀರ್ ಆರೀಫ್ ಸ.ಕಾ.ನಿ.ಅ ಮೂಲಭೂತ ಸೌಕರ್ಯ ಕೇಂದ್ರ | 9900260607 |

1) ಸಭೆಯಲ್ಲಿ ಹಾಜರಿದ್ದ ಶ್ರೀ.ಜೆನ್‌ಸನ್ ರವರು ಭುವನಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶದ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಚಟುವಟಿಗಳು ಹಾಗೂ ಧೂಮಪಾನ ಹೆಚ್ಚಾಗುತ್ತಿರುತ್ತದೆ ಈ ಸಂಬಂಧ ಪ್ರತಿನಿತ್ಯ ಈ ತರಹದ ಚಟುವಟಿಕೆಗಳನ್ನು ಗುರುತಿಸಿ ಸ್ಥಳದಲ್ಲೇ ದಂಡವನ್ನು ವಸೂಲಾತಿ ಮಾಡಲಾಗುತ್ತಿದ್ದರೂ ಸಹ ನಿಯಂತ್ರಣಕ್ಕೆ ಬರುತ್ತಿಲ್ಲ ಎಂದು ತಿಳಿಸಿದರು. ಆಗ ಮಾನ್ಯ ಅಧ್ಯಕ್ಷರು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರಿಗೆ ಸೂಚಿಸುತ್ತಾ ಈ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ ಕೂಡಲೇ ಕಾನೂನು ರೀತ್ಯ ಕ್ರಮ ಜರುಗಿಸಲು ತಿಳಿಸಿದರು.

2) ಕಳೆದ ಸಭೆಯಂತೆ ಈ ಸಭೆಯಲ್ಲೂ ತಾವರೆಕೆರೆ ಮುಖ್ಯರಸ್ತೆಯ ಕಾಮಗಾರಿಯ ಬಗ್ಗೆ ಮಾನ್ಯ ಅಧ್ಯಕ್ಷರು ಪ್ರಸ್ತಾಪಿಸಲಾಗಿ, ಸಭೆಯಲ್ಲಿ ಹಾಜರಿದ್ದ ಮೊಹಮದ್ ಅಜ್ಮೀರ್ ಆರೀಫ್ ಸ.ಕಾ.ನಿ.ಅ ಮೂಲಭೂತ ಸೌಕರ್ಯ ಕೇಂದ್ರ ಮತ್ತು ಶ್ರೀ.ಶಶೀದರ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ಕೇಂದ್ರ ಕಛೇರಿ, ರವರು ಮಾತನಾಡಿ ಸದರಿ ಕಾಮಗಾರಿಯ ಕಾರ್ಯದೇಶವನ್ನು ನೀಡಲಾಗಿದ್ದು, ಮುಂದಿನ ವಾರದೊಳಗಾಗಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ತಿಳಿಸಿದರು.

3) ಶ್ರೀ ಲೋಕೇಶ್‌ರವರು ಮಾತನಾಡಿ, ಭಾರತಿ ಬಡಾವಣೆ 1ನೇ ಮುಖ್ಯಸರ್ತೆ, ಶ್ರೀ.ಸುಬ್ರಮಣಿ ದೇವಸ್ಥಾನದ ಹತ್ತಿರ 3 ವಿದ್ಯುತ್ ಕಂಬಗಳು ವಾಲಿರುವುದು ಕಂಡುಬಂದಿರುತ್ತದೆ ಈ ಬಗ್ಗೆ ಅಗತ್ಯ ಕ್ರಮವಹಿಸಲು ತಿಳಿಸಿದರು.

ಈ ಸಂಭಂಧ ಅಧ್ಯಕ್ಷರು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಾದ ಶ್ರೀ ಗೀರಿಶ್ ರವರಿಗೆ ಕೂಡಲೇ ಸದರಿ ವಿದ್ಯುತ್ ಕಂಬಗಳನ್ನು ದುರಸ್ಥಿಪಡಿಸಲು ತಿಳಿಸಿದರು.



Scanned with CamScanner

4) ವಾರ್ಡ್ ಅಭಿಯಂತರರು ಮಾತನಾಡಿ, ಕಾವೇರಿ ಬಡಾವಣೆ 1ನೇ ಅಡ್ಡರಸ್ತೆಯಲ್ಲಿ ಒಳಚರಂಡಿ ಸಂಪರ್ಕಕ್ಕಾಗಿ ಕಾಮಗಾರಿ ನಡೆಯುತ್ತಿದ್ದು, ಕಾಮಗಾರಿ ಪೂರ್ಣಗೊಂಡ ನಂತರ ರಸ್ತೆಯನ್ನು ಯಥಾಸ್ಥಿತಿ ಕಾಪಾಡಲು ಸಭೆಯಲ್ಲಿ ಹಾಜರಿದ್ದ ಶ್ರೀ ಕೃಷ್ಣ ಕೆಲಸ ಪರಿವೀಕ್ಷಕರು ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ರವರಿಗೆ ತಿಳಿಸಿದರು.

5) ಮಾನ್ಯ ಅಧ್ಯಕ್ಷರು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಬೇಸ್ಕಾಂ ಅಧಿಕಾರಿಗಳಿಗೆ ತಮ್ಮ ಇಲಾಖೆಯಿಂದ ಹೊಸ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ನೀಡಲು ಯಾವ ಯಾವ ಮಾನದಂಡಣೆಗಳನ್ನು ಅಳವಡಿರುವ ಬಗ್ಗೆ ಪೂರ್ಣ ಮಾಹಿತಿಗಳನ್ನು ವಾರ್ಡ್ ಅಭಿಯಂತರರಿಗೆ ಒದಗಿಸಲು ಸೂಚಿಸಿದರು.

6) ಮಾನ್ಯ ಅಧ್ಯಕ್ಷರು ಮಾತನಾಡಿ, ಪ್ರಸ್ತುತ ಸಭೆ ನಡೆಯುತ್ತಿರುವ ಉದ್ಯಾನವನದಲ್ಲಿರುವ ಗಿಡ ಮರಗಳಿಗೆ ಸರಿಯಾಗಿ ನೀರನ್ನು ಹಾಕದೇ ಇರುವುದು ಮತ್ತು ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದು ಕಂಡುಬಂದಿದ್ದು, ಸಭೆಯಲ್ಲಿ ಹಾಜರಿದ್ದ ಶ್ರೀಮತಿ ಭೂದೇವಿ ತೋಟಗಾರಿಕೆ ಇಲಾಖೆ ರವರಿಗೆ ಕೇಳಲಾಗಿ, ಉದ್ಯಾನವನದಲ್ಲಿರುವ ಕೊಳವೆಬಾವಿಯ ಪಂಪ್ ಹಾಳಾಗಿರುತ್ತದೆ. ಆದುದರಿಂದ ಟ್ಯಾಂಕರ್ ಮುಖೇನ ನೀರನ್ನು ಹಾಕಲಾಗುತ್ತಿರುತ್ತದೆ ಎಂದು ತಿಳಿಸಿದರು. ಅದಕ್ಕೆ ಅಧ್ಯಕ್ಷರು ಕೂಡಲೇ ಕೊಳವೆಬಾವಿಯನ್ನು ದುರಸ್ಥಿ ಪಡಿಸಲು ಮತ್ತು ಉದ್ಯಾನವನ್ನು ಸರಿಯಾಗಿ ನಿರ್ವಹಣೆ ಮಾಡಲು ಸೂಚಿಸಿದರು.

7) ಮಾನ್ಯ ಅಧ್ಯಕ್ಷರು ಮಾತನಾಡಿ, ಪಾಲಿಕೆ ವಾರ್ಡ್ ಅನುದಾನಡಿಯಲ್ಲಿ 2021-22ನೇ ಸಾಲಿಗೆ ಮಿಸಲಿಟ್ಟ ಅನುದಾನಕ್ಕೆ ವಾರ್ಡ್ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿ, ಚರ್ಚಿಸಿ ಅಗತ್ಯವಾಗಿರುವ ಕಾಮಗಾರಿಗಳನ್ನು ಅಳವಡಿಸಿಕೊಂಡು ಕ್ರಿಯೋಜನೆಯನ್ನು ತಯಾರಿಸಲು ತಿಳಿಸಿದರು.

8) ಶ್ರೀ.ನವೀನ್ ಕಂದಾಯ ಪರಿವೀಕ್ಷರು ಮಾತನಾಡಿ, ಜನವರಿ 2021ರ ಅಂತ್ಯದಲ್ಲಿ ರೂ.1.32 ಕೊಟಿ ಕಂದಾಯವನ್ನು ಸಂಗ್ರಹಿಸಲಾಗಿರುತ್ತದೆ. 33 ಆಸ್ತಿಗಳನ್ನು ಪರಿಷ್ಕರಿಸಲಾಗಿರುತ್ತದೆ ಮತ್ತು ಪ್ರತಿ ಬುಧವಾರ ತೆರಿಗೆ ಡ್ರೈವ್‌ನ್ನು ಹಮ್ಮಿಕೊಳ್ಳಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ, ಅಧ್ಯಕ್ಷರು ಮಾತನಾಡಿ, ಈ ಸಭೆಗೆ ಗೈರಾದ ಅಧಿಕಾರಿಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

S. Prabhakar
(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.



Scanned with CamScanner